ಲಲಿತಮಂಟಪ

# ವಿಮರ್ಶಕನ ಬರಹ ಸದ್ದು ಮಾಡಬೇಕು, ಅವನೇ ಮುನ್ನೆಲೆಯಲ್ಲಿ ಇರಬಾರದು

## ಕಲಾವಿಮರ್ಶಕ ಆಶೀಶ್ ಮೋಹನ್ ಖೋಕರ್ ಸಂದರ್ಶನ

**ಕೋಡಿಬೆಟ್ಟು ರಾಜಲಕ್ಷ್ಮಿ**

ಪ್ರಸಿದ್ಧ ನೃತ್ಯ ಇತಿಹಾಸಕಾರ ಮೋಹನ್ ಖೋಕರ್ ಮತ್ತು ಭರತನಾಟ್ಯ ಕಲಾವಿದೆ ಎಂ.ಕೆ. ಸರೋಜಾ ಅವರ ಮಗನಾಗಿ 1960ರ ಫೆಬ್ರುವರಿ 29ರಂದು ಬರೋಡಾದಲ್ಲಿ ಜನಿಸಿದ ಆಶೀಶ್ ಮೋಹನ್ ಖೋಕರ್ ಭಾರತದ ಪ್ರಸಿದ್ಧ ನೃತ್ಯ ವಿಮರ್ಶಕ ಮತ್ತು ನೃತ್ಯ ಇತಿಹಾಸಕಾರ. ನೃತ್ಯಕ್ಕೆ ಸಂಬಂಧಿಸಿದಂತೆ ಭಾರತದಲ್ಲಿರುವ ಏಕೈಕ ಇಯರ್‌ಬುಕ್ 'ಅಟೆಂಡೆನ್ಸ್' (attenDance)ನ ಸಂಪಾದಕರಾಗಿ ಕಳೆದ ಇಪ್ಪತ್ತನಾಲ್ಕು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ವಿವಿಧ ಪತ್ರಿಕೆಗಳಲ್ಲಿ ಅಂಕಣಕಾರರಾಗಿ ನೃತ್ಯಕಲಾಕ್ಷೇತ್ರದ ಬಗ್ಗೆ ಬರೆಯುತ್ತಿರುವ ಅವರು – ನೃತ್ಯ ಇತಿಹಾಸ, ಅಧ್ಯಯನ ಮತ್ತು ವಿಮರ್ಶೆಗೆ ಸಂಬಂಧಿಸಿದ 45 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'ಡಾನ್ಸ್ ಹಿಸ್ಟರಿ ಸೊಸೈಟಿ'ಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಫ್ರಾನ್ಸ್, ಸ್ವೀಡನ್, ಜರ್ಮನಿ, ಚೀನಾ ಮುಂತಾದ ದೇಶಗಳಲ್ಲಿ ಭಾರತೀಯ ಕಲಾ ಉತ್ಸವಗಳನ್ನು ಆಯೋಜಿಸುವ ಸಾಂಸ್ಕೃತಿಕ ಆಡಳಿತಗಾರರಾಗಿಯೂ ಕೆಲಸ ಮಾಡಿದ್ದಾರೆ. ಅವರೊಡನೆ ನಡೆಸಿದ ಮಾತುಕತೆಯ ಆಯ್ದ ಭಾಗ ಇಲ್ಲಿದೆ.